

ಚಟುವಟಿಕೆ 11: 3ಡಿ ಯಲ್ಲಿ ಭೂದೃಶ್ಯ ಮತ್ತು ಶಿಲ್ಪಕಲೆಯನ್ನು ರಚಿಸುವುದು–ನನ್ನ ರಸ್ತೆ

ವಯಸ್ಸು: 6 ವರ್ಷ ಮೇಲ್ಪಟ್ಟವರು

ವಸ್ತುಗಳು: ನಿಮ್ಮ ಮನೆಯ ಸುತ್ತಮುತ್ತ ಸಿಗುವ ವಿವಿದ ವಸ್ತುಗಳು, ಖಾಲಿ ಪೆಟ್ಟಿಗೆಗಳು, ಪ್ಲಾಸ್ಟಿಕ್ ಬಾಟಲಿಗಳು, ಪಾತ್ರೆಗಳು, ಚಿಂದಿ ಪೇಪರ್ ಗಳು, ಇತ್ಯಾದಿ

ನೆನಪಿನಲ್ಲಿಡಬೇಕಾದ ಅಂಶಗಳು:

1. ನಿಮ್ಮೊಂದಿಗೆ ಕೆಲಸ ಮಾಡಲು ಕುಟುಂಬದ ಸದಸ್ಯರು ಅಥವಾ ನಿಮ್ಮ ಸ್ನೇಹಿತರನ್ನು ಆಯ್ಕೆಮಾಡಿಕೊಳ್ಳಿ.
2. ನೀವು ಮತ್ತು ನಿಮ್ಮ ಚಟುವಟಿಕೆ ಭಾಗೀದಾರರು ಒಟ್ಟಿಗೆ ಈ ಚಟುವಟಿಕೆಯನ್ನು ಮಾಡಿ ಹಾಗೂ ಒಂದು ಶಿಲ್ಪಕಲೆಯನ್ನು ರಚಿಸಿ.
3. ನಿಮ್ಮ ಮನೆಯ ಮುಂದೆ ನಿಂತುಕೊಂಡು ನಿಮ್ಮ ಮನೆಯ ರಸ್ತೆಯನ್ನು ಗಮನಿಸಿ.
4. ಯಾವ ರೀತಿಯಾದಂತಹ ಮನೆಗಳು ಮತ್ತು ಕಟ್ಟಡಗಳಿವೆ ಹಾಗೂ ಯಾವ ರೀತಿಯಾದಂತಹ ಮರ–ಗಿಡಗಳಿವೆ ಎಂಬುದನ್ನು ಗಮನಿಸಿ.

5. ರಸ್ತೆಯಲ್ಲಿ ಯಾವುದಾದರೂ ಪ್ರಾಣಿಗಳಿವೆಯಾ? ವಾಹನಗಳಿವೆಯಾ? ಎಂಬುದನ್ನು ಗಮನಿಸಿ.
6. ರಸ್ತೆಯ ಮಾದರಿಯನ್ನು ರಚಿಸಲು ಬಳಸಬಹುದಾದಂತಹ ವಸ್ತುಗಳನ್ನು ಹುಡುಕಿ.
7. ರಸ್ತೆಯಲ್ಲಿರುವ ವಸ್ತುಗಳನ್ನು ಗಮನಿಸಿ ಹಾಗೂ ನಿಮ್ಮಲ್ಲಿರುವ ವಸ್ತುಗಳನ್ನು ಅವುಗಳ ಆಕಾರಕ್ಕೆ ಹೊಂದುವಂತೆ ಹೋಲಿಸಿ ನಂತರ ನಿಮ್ಮ ಮಾದರಿ ರಸ್ತೆಗೆ ಅದನ್ನು ಅಂಟಿಸಿ.
8. ನಿಮ್ಮ ರಸ್ತೆಯ ಮಾದರಿಗೆ ವಿವರಗಳನ್ನು ಸೇರಿಸಲು ನೀವು ಚಿಂದಿ(ಸ್ಕ್ರ್ಯಾಪ್) ಪೇಪರ್ ಗಳನ್ನು ಬಳಸಬಹುದು.

**ನಿಮ್ಮ ಪಾಲುದಾರರೊಂದಿಗೆ ಕೆಲಸ ಮಾಡುವಾಗ ಪರಿಗಣಿಸಬೇಕಾದ ಅಂಶಗಳು**

1. ನಿಮ್ಮ ಚಟುವಟಿಕೆ ಭಾಗೀದಾರರೊಂದಿಗೆ ಯಾವಾಗಲೂ ಸಹಭಾಗಿತ್ವದಲ್ಲಿ ಕೆಲಸಮಾಡಿ ಮತ್ತು ಪರಸ್ಪರ ವಿಚಾರಗಳನ್ನು **ಹಂಚಿಕೊಳ್ಳಿ** ಮತ್ತು ಗೌರವಿಸಿ.
2. ನಿಮ್ಮ ರಸ್ತೆಯ ಶಿಲ್ಪಕಲೆಯನ್ನು ರಚಿಸಲು ಒಟ್ಟಿಗೆ ಕೆಲಸ ಮಾಡಿ.

*ArtSparks Foundation*

ARTSPARKS
CURIOSITY. CREATIVITY. LEARNING.

www.art-sparks.org